

ಅಂತ ಅಲ್ಲು ಇಲ್ಲು ಫೋಟೋ ತಗುಸ್ಕೊಳೋದೆ ತಗುಸ್ಕೊಳೋದು ಬನ್ರಮ್ಮ ಸಾಕು ಈ ಕಡೆ ನಾನು ಒಂಚೂರು ತಗುಸ್ಕೊತಿನಿ' ಅಂತ ಮೆಲ್ಲಗೆ ಗದರದ್ರು.

ಒಂದಿಬ್ರು ಸುಮ್ನೆ ಇದ್ದರು. ಇನ್ನೊಬ್ಬಳು 'ಹೂ ತಾತ! ನಾವೇನೋ ಹೀರೋಯಿನ್ನೆ!!! ಹಾಗೆ ತಿಳ್ಕೊಳಿ... ನೀವು ಹೇಗಿದ್ದೀರಾ ತಾತ ನೀವೇನ್ ಹೀರೋನಾ? ನೀವು ನಮ್ ತರಾನೇ ಫೋಟೋ ತೆಗೆಸಿಕೊಳ್ಳೋಕೆ ಬಂದಿದ್ದೀರಾ...? ನೀವು ಹೀರೋ ಇರಬೇಕು ಅಲ್ವಾ! ನಿಮ್ ಫ್ಯಾನ್ಸು ಎಲ್ಲ ಬಂದಿರಬೇಕು! ಅದಕ್ಕೆ ಪಾಪ ಅಜ್ಜಿ ಬಂದಿಲ್ಲ!' ಅಂತ ನಗ್ತಾನೆ ಉತ್ತರ ಕೊಟ್ಟು. ಪಾಪ! ಆ ವೃದ್ಧಿಗೆ ಒಂದ್ ಕ್ಷಣಕ್ಕೆ ಹಾಗೆ ಹೊರಟೋಗ್ಬಿಡ್ಲಾ ಅನ್ನಿಸ್ಬಿಡ್ತು, ಮುಜುಗರನ ಅನುಭವಿಸಬಹುದು ಆದರೆ ಜನರೆದ್ರು ತೋರಿಸಿಕೊಳ್ಳಕಾಗುತ್ತಾ? ಅವರು ನನಗೇನು ಕೇಳ್ಸಿಲ್ಲ ಅಂತಾನೆ ಓದಿಸಿ ಎಲ್ ಹೋದ್ರು ಗೊತ್ತೇ ಆಗ್ಲಿಲ್ಲ.

ಸರಿ! ಇಲ್ಲಿ 'ಓದಿಸೋದು' ಅಂದ್ರೆ ಏನು ಅಂದ್ರೆ ನಮ್ಮಲ್ಲಿ ಪ್ರಸೆಂಟೇಶನ್ ಕೊಡೋದು, ಗಿಫ್ಟ್ ಕೊಡುವುದು, ಕವರ್ ಮಾಡುವುದು. ಮುಯ್ ಹಾಕುವುದು ಅಂತಾರಲ್ಲ ಹಾಗೆ.

'ಓದಿಸೋದು' ಅಂದ್ರೆ ಉಡುಗೊರೆ ಕೊಡುವುದು ಎಂದರ್ಥ. 'ಉಡುಗೊರೆ' 'ಉಡುವ ಕೋರಿ' ಅಥವಾ ಬಟ್ಟೆನೆ ಉಡುಗೊರೆ. 'ಕ'ಕಾರ 'ಗ'ಕಾರ ಆಗಿದೆ ಅಷ್ಟೆ. 'ಕೋರಿ' ಎಂದರೆ 'ಸೀರೆ' ಎನ್ನುವ ಅರ್ಥವಿದೆ. ಆದರೆ ಇಂದು ಜಾಕೆಟ್ ಪೀಸ್, ಅದೇ ಉಪಯೋಗಕ್ಕೆ ಬಾರದ ರವಿಕೆ ಕಣ ಕೊಟ್ಟರೂ ಅಥವಾ ಇನ್ಯಾವುದೇ ವಸ್ತು ಕೊಟ್ಟರೂ ಉಡುಗೊರೆ ಇಲ್ಲವೆ ಗಿಫ್ಟ್ ಎನ್ನುತ್ತಾರೆ. 'ಮುಯ್ಯಿ' ಎಂದರೆ ಪ್ರೆಸೆಂಟಶನ್ ಕೊಡುವುದು ಎಂದರ್ಥ. 'ನಾನು ಕವರಿಗೆ ಸಾವಿರದ ಒಂದು ರೂಪಾಯಿ ಹಾಕಿದ್ದೆ ನೋಡ್ವ ಅವರ್ನ ಐನೂರೇ ರುಪಾಯಿ ಹಾಕಿ ಮನೆ ಮಂದಿ ಎಲ್ಲಾ ಬಂದು ಊಟ ಮಾಡ್ಕೊಂಡು ಹೋಗಿರದು' ಎಂದು ಕವರ್ ತೆಗೆಯುವಾಗ ಆಡುವ ಮಾತುಗಳಿಗೇನು ಕಡಿಮೆಯಿಲ್ಲ!

ಒಂಥರಾ ಡಿ ಕೋಡಿಂಗ್ ಇದ್ದಹಾಗೆ ಈ ಕವರ್ ಲೆಕ್ಕಾಚಾರ. ನಮ್ಮೀ ಕೊಡು ಕೊಳ್ಳುವಿಕೆ ಇದ್ದ ಹಾಗೆ. ಹೊಲಗದ್ದೆಗಳ ಕೆಲಸಕ್ಕೆ ಜನ ಸಿಗದೆ ಇದ್ದಾಗ ಅಥವಾ ಕೂಲಿನ ದುಬಾರಿ ಕೊಟ್ಟು ಕೆಲ್ಸಕೆ ಕರೆಯುವುದಕ್ಕಿಂತ ಕೆಲ್ಸಕೆ ಕೆಲಸವನ್ನೇ ಮಾಡುವ ಪದ್ಧತಿಗೆ ಮುಯ್ಯಿಆಳು ಎನ್ನುವರು. ಹೀಗೆ ಮುಯ್ಯಿ ಆಳಿಗೆ ಒಪ್ಪಿದರೆ ಎಂಥ ಕೆಲಸವಿದ್ದರು ಹೋಗಲಿ ಯಾರಾದ್ರೂ ಕಾಯಿಲೆ ಬಿದ್ದಿದ್ರು ಸರಿ! ಬಿಟ್ಟು ಕೆಲಸ ಮಾಡಲೇಬೇಕಾದ ಅನಿವಾರ್ಯತೆ ಇದ್ದೇ ಇರುತ್ತೆ ಗೊತ್ತಾ!.

ಗಿಫ್ಟಿಗೆ ಪ್ರತಿಯಾಗಿ ರಿಟರ್ನ್ ಗಿಫ್ಟ್ ಎನ್ನುವ ರೂಢಿ ಇದ್ದೇ ಇದೆ! ಇದು ಖಂಡಿತಾ ಹೊಸದಲ್ಲ. ನಮ್ಮಲ್ಲಿ ಮದುವೆ ಮೊದಲಾದ ಶುಭಕಾರ್ಯಗಳಲ್ಲಿ ಊಟದ ನಂತರ ಹೆಣ್ಣು ಮಕ್ಕಳಿಗೆ ಸೀರೆನೋ, ಬಟ್ಟೆನೋ, ಲೋಟನೋ ಉಡುಗೊರೆಯನ್ನು ಗಂಡು ಮಕ್ಕಳಿಗೆ ಫಲತಾಂಬೂಲವನ್ನೂ ತೀರಾ ಹತ್ತಿರದವರಾದರೆ ವಸ್ತ್ರ ಇತರೆ ವಸ್ತುಗಳನ್ನು ಕೊಡುವ ಪದ್ಧತಿ ಇತ್ತು. ಈಗಲೂ ಇದೆ. ಇಲ್ಲಿ ಕುತೂಹಲ ಹೆಚ್ಚು ನೋಡ್ರಪ್ಪ. ಎಂಜಿಲು ಕೈನ ಸರಿಯಾಗಿ ತೊಳೆಯುತ್ತಾರೋ ಇಲ್ಲವೋ ಗಿಫ್ಟ್ ತೆರೆದು ನೋಡಿ ಅದಕ್ಕೆ ಕಮೆಂಟ್ ಕೊಟ್ಟು ಆನಂತರ ಬೀಡವೋ ಇಲ್ಲವೋ ಐಸ್ಕ್ರೀಮ್ ಸರತಿಗೆ ಹೋಗುವುದು ಇರಲಿ. ಆನಂತರ ಸೆಲ್ಫಿ ಸ್ಟ್ಯಾಂಡಲ್ಲಿ ದಂಪತಿಗಳು ಸೆಲ್ಫಿ ಕ್ಲಿಕ್ಕಿಸಿಕೊಳ್ಳುವುದು.

ದಂಪತಿ ಅನ್ನೋವಾಗ ದಮ್ಮುಪತಿ ನೆನಪಾದ ನೋಡಿ! ಈ ವರ್ಷ ಮಳೆ ಹೆಚ್ಚೇ ಇತ್ತು! ಮಳೆ ಇನ್ನೂ ಕಡಿಮೆ ಆಗಿರಲಿಲ್ಲ. ಶ್ರಾವಣ ಬಂದಂತೆಯೇ ಮದುವೆ, ಗೃಹಪ್ರವೇಶ ಮೊದಲಾದ ಶುಭ ಕಾರ್ಯಗಳು ಪ್ರಾರಂಭವಾಗಿಬಿಟ್ಟವು. ನಾವು ಹೋಗಿದ್ದಲ್ಲಿಗೇ ಶೀತ ನೆಗಡಿಯಿಂದ ಬಳಲುತ್ತಿದ್ದವರೊಬ್ಬರು ಕೆಮ್ಮುತ್ತಲೇ ಸೆಲ್ಫಿ ಸ್ಟ್ಯಾಂಡಿಗೆ ಬಂದು ನಿಂತರು. ಇನ್ನೇನು ಫೋಟೊ ತೆಗೆಯಬೇಕು ಎನ್ನುವಾಗಲೆ ಕೆಮ್ಮು ಬಂದೇ ಬಿಡುತ್ತಿತ್ತು. ಎರಡು ಮೂರು ಬಾರಿ ಹೀಗೆ ಆಯಿತು, ಕೆಮ್ಮಿದರೆ ಗೊರ ಗೊರ ಸದ್ದೂ ಬರುತ್ತಾ ಇತ್ತು. ಅಂದರೆ ಅಸ್ತಮಾ ಅಂತ ಅರ್ಥ ಅಲ್ವ! ಇರಲಿ ಕೆಮ್ಮು ದಮ್ಮು ಹೆಚ್ಚಿದ್ದ ಕಾರಣ ಆ ದಿನ ನನಗೆ ಇವರೆ ನಿಜವಾದ 'ದಮ್ಮು ಪತಿ' ಅನ್ನಿಸ್ತು. ದಮ್ಮಿಗೇ ಒಡೆಯ ಅಂತಾ!

ದಮ್ಮಿಗೆ ಮಹಾಪ್ರಾಣ ಬಂದು 'ಧಂ' ಆದರೆ ಧೈರ್ಯ, ಉಸಿರು ಎನ್ನುವ ಅರ್ಥವೂ ಇದೆ ತಿಳ್ಕಳಿ. ಹೊಸ ಮನೆ ಕಟ್ಟೋವಾಗ ಮನೆ ಕಟ್ಟೋರಿಗೆ, ಪಕ್ಕದ ಸೈಟವರಿಗೆ ಕಾಂಪೌಂಡ್‌ಗೆ ಜಾಗ ಬಿಡುವ ವಿಚಾರದಲ್ಲಿ ತಕರಾರು ಇದ್ದೇ ಇರುತ್ತದೆ. ಆಗ ಒಬ್ಬ 'ಧಂ' ಇದ್ದರೆ ಕಟ್ಟು ನೋಡೋಣ ಅಂದರೆ ಪ್ರತಿಯಾಗಿ ಇನ್ನೊಬ್ಬ 'ಧಂ' ಇದ್ದರೆ ನಿಲ್ಸು ನೋಡೋಣ ಎನ್ನುವ ಸವಾಲು ಪ್ರತಿ ಸವಾಲುಗಳನ್ನು ಹಾಕಿಯೇ ಇರುತ್ತಾರೆ.

ಇನ್ನು 'ಹಿಡಿದ ಕಾರ್ಯವನ್ನು ಬೇಗನೆ ಸರಿಯಾಗಿ ಮಾಡಿಯೇ ಬಿಟ್ಟೆ' ಎನ್ನುವ ಸಂದರ್ಭದಲ್ಲಿಯೂ 'ಧಂ ಕಟ್ಟಿ ಮಾಡಿದೆ' ಎನ್ನುವುದಿದೆ. ಇನ್ನು ಇಂಡಿಯಾ ಪಾಕಿಸ್ತಾನ ಒನ್ ಡೇ ಮ್ಯಾಚ್ ಇರ್ಬೇಕು ಸೆಕೆಂಡ್ ನಮ್ ಕಡೆಯವರ್ದೆ ಬ್ಯಾಟಿಂಗ್ ಅಂದ್ಕೊಳಿ ಅಂದ್ರೆ ಇಂಡಿಯಾದ್ದೆ ಆಗಿರ್ಬೇಕು ಕಡೆಯ ಓವರ್ ಎರಡು ಬಾಲ್ ಮೂರು ರನ್ ಬೇಕಾಗಿದೆ ಎನ್ನೋವಾಗ ಫೋರ್ ಸಿಡಿದರೆ ಹೆಂಗಿರುತ್ತೆ? ಇಂಡಿಯಾ ಗೆಲ್ಲುತ್ತೆ ಅಂದ್ಕೊಳಿ ಹೀಗ್ ಉಸಿರು ಬಿಗಿ ಹಿಡಿದುನೋಡುವುದಕ್ಕೂ 'ಧಂ ಕಟ್ಟಿ ಮ್ಯಾಚ್ ನೋಡಿದೆ' ಅಂತಾರೆ ಗೊತ್ತಾ! ಹಾಗೆ ನಿಜವಾದ ಧಂಪತಿಗಳು ಅಂದ್ರೆ ಸಿಗರೇಟ್ ಸೇದೋರು. ಗೊತ್ತಿಲ್ಲದೆ ಇದ್ದವರಿಗೆ ಒಂದು 'ಧಂ' ಎಳಿ ನೋಡೋಣ ಎಂದು ದುರಾಭ್ಯಾಸ ಮಾಡಿಸಿ ಚಟ

## ಮನದ ಭಾಷೆಯ 'ಚೆನ್ನುಡಿ'

'ನಾವಾಡುವ ನುಡಿಯೇ ಕನ್ನಡ ನುಡಿ' ಅಂತ ಅಣ್ಣಾವ್ರು ಹಾಡಿದಾಗಲೆಲ್ಲ, ನಮ್ಮ ಮನೆಯ ನುಡಿ ನಮ್ಮ ಮನಸಿಗೆ ಬರುತ್ತದೆ. ಕನ್ನಡದ ವೈವಿಧ್ಯಮಯ ಧಾಟಿಯ ಮಾತುಗಳಲ್ಲಿ ಕನ್ನಡ ನುಡಿ ಸಿರಿವಂತಿಕೆ ಈ 'ಚೆನ್ನುಡಿ' ಸರಣಿಯಲ್ಲಿ ಪ್ರಕಟವಾಗಲಿದೆ. ಕನ್ನಡ ಭಾಷೆಯ ಧ್ವನಿ ಕೇಳಲು **ಪ್ರಜಾವಾಣಿಯ ಕನ್ನಡ ಧ್ವನಿ ಪಾಡ್‌ಕಾಸ್ಟ್** ಕೇಳಿ. ಪ್ರತಿ ಗುರುವಾರ ಬೆಳಗ್ಗೆ 9 ಗಂಟೆಗೆ ಈ ಸರಣಿಯ ಲೇಖನದ ಓದು ನಿಮ್ಮ ಕೇಳ್ವಿಕೆಗೆ ಪ್ರಸಾರವಾಗಲಿದೆ.

ಕಳೆದ ವಾರದ 'ಚೆನ್ನುಡಿ'
'ಉಳಿದವರು ಕಂಡಂತೆ' ಕೇಳಿ
**ಕುಸುಮಾ ಆಯರಹಳ್ಳಿ** ಅವರ ಧ್ವನಿಯಲ್ಲಿ



ಪಾಡ್‌ಕಾಸ್ಟ್ ಕೇಳಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.